# ಛಾಯಾಪ್ರತಿ ಅಲ್ಲ; ಛಾಯಾಗ್ರಾಹಕ!



ಈ ಹುಡುಗನಿಗೆ ಈಗಷ್ಟೇ 20ರ ಹರೆಯ. ದೇಶದ ಹಲವು ಅಭಯಾರಣ್ಯಗಳನ್ನು ಸುತ್ತಿ ಹುಲಿ, ಚಿರತೆಗಳ ಬದುಕಿನ ರೋಚಕ ಕ್ಷಣಗಳನ್ನು ಸೆರೆ ಹಿಡಿಯುವುದೆಂದರೆ ಬಲು ಉಮೇದಿ. 'ವನ್ಯಜೀವಿ ಜಗತ್ತಿನಲ್ಲಿ ಕಳೆದುಹೋಗುವುದಕ್ಕಿಂತ ಖುಷಿಯ ಕೆಲಸ ಬೇರೇನಿಲ್ಲ. ಓದಿನ ನಡುವೆ ಸಮಯ ಸಿಕ್ಕಾಗಲೆಲ್ಲ ನನ್ನ ಸವಾರಿ ಕಾಡಿನತ್ತಲೇ ಹೋಗುತ್ತದೆ' ಎನ್ನುವ ಈ ಹುಡುಗ ಅಚ್ಚರಿ ಮೂಡಿಸುತ್ತಾನೆ. ಏಕೆಂದರೆ, ದೇಶದ ಅತ್ಯಂತ ಪ್ರತಿಷ್ಠಿತ ಕುಟುಂಬದ ಕುಡಿ ಆತ. ಆತನ ಅಜ್ಜಿ ದೇಶದ ಪ್ರಮುಖ ಪಕ್ಷವೊಂದರ ನಾಯಕಿ, ಮುತ್ತಜ್ಜಿ ಜಗತ್ತೇ ಬೆರಗುಗಣ್ಣಿನಿಂದ ನೋಡಿದ ಅಧಿನಾಯಕಿ! ಮತ್ತೆ ಅಮ್ಮ? ಬಲಿಷ್ಠ ಪ್ರಧಾನಿ ವಿರುದ್ಧ ಧ್ವನಿ ಎತ್ತಿ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿದ ಗಟ್ಟಿಗಿತ್ತಿ. ಅಂದಹಾಗೆ, ಆ ಹುಡುಗನ ಹೆಸರು ರೈಹಾನ್ ವಾದ್ರಾ ಎಂದು.

ನಿಮ್ಮ ಊಹೆ ನಿಜ. ಈತ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹಾಗೂ ರಾಬರ್ಟ್ ವಾದ್ರಾ ಅವರ ಮಗ. ಸೋನಿಯಾ ಗಾಂಧಿ ಅವರ ಮೊಮ್ಮಗ. ಹಾಗೆಯೇ ಇಂದಿರಾ ಗಾಂಧಿ ಅವರ ಮರಿಮೊಮ್ಮಗ. ಕ್ಯಾಮೆರಾ ಹಿಡಿದು ನಿಂತನೆಂದರೆ ಈ ಹುಡುಗನಿಗೆ ನಾನೊಂದು ಪ್ರತಿಷ್ಠಿತ ಕುಟುಂಬದ ಕುಡಿ ಎಂಬ ಯಾವ ಹಮ್ಮು–ಬಿಮ್ಮು ಕಾಣುವುದಿಲ್ಲ. 'ಕ್ಯಾಮೆರಾ ಕಣ್ಣಿನ ಮೂಲಕ ನಾನು ಜಗತ್ತನ್ನು ನೋಡುತ್ತಿರುವೆ. ಮುಂದೆ ಯಾವ ಕ್ಷೇತ್ರದಲ್ಲೇ ಭವಿಷ್ಯ ಕಂಡುಕೊಳ್ಳಲಿ, 'ಲೆನ್ಸ್' ಜತೆಗಿನ ನನ್ನ ಸಂಬಂಧ ಹೀಗೇ ಮುಂದುವರಿಯುತ್ತದೆ' ಎಂದು ರೈಹಾನ್ ಹೇಳುತ್ತಾನೆ.

ರೈಹಾನ್, ತಾನು ಇದುವರೆಗೆ ಕಾಡು–ಮೇಡು ಸುತ್ತಿ ತೆಗೆದ ಚಿತ್ರಗಳ ಪ್ರದರ್ಶನವನ್ನು ಕಳೆದ ವಾರ ದೆಹಲಿಯಲ್ಲಿ ಏರ್ಪಡಿಸಿದ್ದ. ಪ್ರದರ್ಶನದ ಉದ್ಘಾಟನೆ ಕಾರ್ಯಕ್ರಮದ ವರದಿಗೆ ಬಂದ ಪತ್ರಕರ್ತರಿಗೆ ಆತನ ಫೋಟೊಗ್ರಫಿ ಕಲೆ ಮುಖ್ಯವಾಗಲಿಲ್ಲ. 'ಅಮ್ಮನಂತೆ ರಾಜಕೀಯ ಪ್ರವೇಶಿಸುವುದು ಯಾವಾಗ' ಎಂಬ ಪ್ರಶ್ನೆಯನ್ನು ಆತನ ಮುಂದಿಟ್ಟರು. 'ಭವಿಷ್ಯದ ಕುರಿತು ನಾನು ಯಾವ ಯೋಚನೆಯನ್ನೂ ಮಾಡಿಲ್ಲ. ಆದರೆ, ಕ್ಯಾಮೆರಾ ಸಹವಾಸ ಬಿಡುವುದಿಲ್ಲ ಎಂದಷ್ಟೇ ಹೇಳಬಲ್ಲೆ' ಎಂದು ರೈಹಾನ್ ಉತ್ತರಿಸಿದ. ಆತ ತನ್ನ ಛಾಯಾಚಿತ್ರ ಪ್ರದರ್ಶನಕ್ಕೆ ಕೊಟ್ಟ ಹೆಸರು: 'ಡಾರ್ಕ್ ಪರ್ಸೆಪ್ಶನ್ – ಆ್ಯನ್ ಎಕ್ಸ್‌ಪ್ಲೋಜಿಷನ್ ಆಫ್ ಸ್ಪೇಸ್, ಲೈಟ್ ಆ್ಯಂಡ್ ಟೈಮ್'.

ಪ್ರಿಯಾಂಕಾ ಅವರ ಈ ಪ್ರೀತಿಯ ಪುತ್ರ ಪ್ರದರ್ಶನಕ್ಕೆ ಇಟ್ಟಿರುವ 40 ಚಿತ್ರಗಳಲ್ಲಿ ವನ್ಯಜೀವಿಯ ಬದುಕಿದೆ. ಪುರಾತನ ವಾಸ್ತುವಿನ್ಯಾಸದ ವೈಭವವಿದೆ. ಆತ ತೆಗೆದ ಹಳೆಯ ಕಟ್ಟಡಗಳ ಚಿತ್ರಗಳು ಸೊಗಸಾದ ಕಲಾಕೃತಿಗಳಂತೆ ಕಂಗೊಳಿಸುತ್ತವೆ. ವೃತ್ತಿಪರ ಫೋಟೊಗ್ರಫಿ ತರಬೇತಿಯನ್ನು ರೈಹಾನ್ ಪಡೆದಿದ್ದಾನೆಯೇ? ಈ ಪ್ರಶ್ನೆಗೆ ಆತನೇ ಕೊಟ್ಟ ಉತ್ತರ 'ಇಲ್ಲ' ಎಂದು. 'ಹತ್ತು ವರ್ಷದ ಬಾಲಕನಿದ್ದಾಗಲೇ ಅಮ್ಮ ನನ್ನ ಕೈಗೆ ಕ್ಯಾಮೆರಾ ಕೊಟ್ಟಳು. ಅಂದಿನಿಂದ ಇದರ ಸಹವಾಸ ಬಿಟ್ಟಿಲ್ಲ. ನ್ಯೂಯಾರ್ಕ್‌ನಲ್ಲಿ ಎರಡು ವಾರಗಳ ಕೋರ್ಸ್‌ಗೆ ಸೇರಿದ್ದೆ. ಅಲ್ಲಿ ಚಿತ್ರ ಸೆರೆ ಹಿಡಿಯುವ ಕೆಲವು ತಂತ್ರಗಾರಿಕೆಗಳನ್ನು ಕಲಿತೆ' ಎಂದು ವಿವರಿಸುತ್ತಾನೆ.

ದೆಹಲಿಯಲ್ಲಿ ಜನಿಸಿದ ರೈಹಾನ್, ಓದಿದ್ದು ದೆಹಲಿ, ಡೆಹ್ರಾಡೂನ್ ಮತ್ತು ಲಂಡನ್ನಿನಲ್ಲಿ. ಲಂಡನ್‌ಗೆ ಓದಲು ಹೋದ ಬಳಿಕ ಕಾಡು ಸುತ್ತಲು ಕಾಲಾವಕಾಶವೇ ಸಿಗಲಿಲ್ಲ. ಹೀಗಾಗಿ ವನ್ಯಜೀವಿ ಬದುಕಿನ ನನ್ನ ಆಸಕ್ತಿಯನ್ನು ಕೆಲಕಾಲ ಬದಿಗಿಟ್ಟು ಯುರೋಪಿನ ಬೀದಿಗಳನ್ನು ಸುತ್ತಿದೆ. ಅಲ್ಲಿನ ವಾಸ್ತುಶಿಲ್ಪಗಳ ಬಿಂಬವನ್ನು ಸೆರೆ ಹಿಡಿದೆ. ಜನರ ಬದುಕಿನ ಹೃದ್ಯ ಚಿತ್ರಣಗಳೂ ನನ್ನ ಕ್ಯಾಮೆರಾ ಫ್ರೇಮ್‌ನಲ್ಲಿ ಬಂದಿಯಾಗಿವೆ ಎಂದು ರೈಹಾನ್ ಖುಷಿಯಿಂದ ಹೇಳುತ್ತಾನೆ.

ತನ್ನ ಪ್ರದರ್ಶನದ ಶೀರ್ಷಿಕೆಯ ಬಗ್ಗೆ ಪ್ರತಿಕ್ರಿಯಿಸುವ ರೈಹಾನ್, 'ಕತ್ತಲೆ, ಸಮಸ್ಯೆಗಳ ಕುರಿತು ಸಂಪೂರ್ಣ ದೃಷ್ಟಿಕೋನವನ್ನು ನೀಡುತ್ತದೆ. ಏಕೆಂದರೆ, ಕತ್ತಲೆಯಲ್ಲಿ ಏನೂ ಕಾಣುವುದಿಲ್ಲ. ಕತ್ತಲೆ ಇರುವಾಗ ಅಲ್ಲಿ ಯಾವುದೇ ತೀರ್ಪು ಇಲ್ಲ ಮತ್ತು ಆಗ ನಿಮ್ಮ ಆಲೋಚನೆಗಳನ್ನು ಬೇಕಾದ ಹಾಗೆ ಬೆಳೆಸಲು ನೀವು ಸ್ವತಂತ್ರರು... ಕತ್ತಲೆ ಸ್ವಾತಂತ್ರ್ಯ, ಅದೇ ಗ್ರಹಿಕೆ ಜೈಲು' ಎಂದು ಕಾವ್ಯಾತ್ಮಕವಾಗಿ ವಿವರಣೆ ನೀಡುತ್ತಾನೆ. ತಾನು ಕಂಡ ಜಗತ್ತನ್ನು ಫೋಟೊಗ್ರಫಿ ಮೂಲಕ ಪ್ರತಿಬಿಂಬಿಸುತ್ತಿರುವ ವಿನೀತಭಾವ ರೈಹಾನ್‌ಗೆ ಇದೆ. ಬೆಳಕು, ಸ್ಥಳ ಮತ್ತು ಸಮಯ ನಿರಂತರವಾಗಿ ಸಂಧಿಸುತ್ತಾ ಹೊರಹೊಮ್ಮಿಸುವ ಕಲ್ಪನೆಗಳೇ ಅದ್ಭುತ ಎನ್ನುವುದು ಆತನ ಅನುಭವದ ಮಾತು. ಹಲವು ಇಂಟೀರಿಯರ್ ಡಿಸೈನ್ ಹಾಗೂ ಆಹಾರದ ಬ್ರ್ಯಾಂಡ್‌ಗಳಿಗೆ ಫೋಟೊ ತೆಗೆದುಕೊಡುವ ಒಪ್ಪಂದವನ್ನೂ ಮಾಡಿಕೊಂಡಿರುವ ರೈಹಾನ್, ಓದುತ್ತಲೇ ಗಳಿಕೆಯಲ್ಲೂ ತೊಡಗಿರುವ ಹುಡುಗ.

ವ್ಯಕ್ತಿಗಳ ಮುಖದ ಹಾವಭಾವ ಸೆರೆ ಹಿಡಿಯುವುದೆಂದರೆ ಈ ಹುಡುಗನಿಗೆ ತುಂಬಾ ಖುಷಿ. ಜನಜಾತ್ರೆಗಳು ಸಹ ಈತನನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ಕ್ಯಾಮೆರಾಗಳ ದೊಡ್ಡ ಸಂಗ್ರಹವೇ ಆತನ ಬಳಿ ಇದೆ. ಜೇಬಿನಲ್ಲಿರುವ ಐಫೋನ್‌ನಿಂದಲೂ ಚಿತ್ರ ಸೆರೆ ಹಿಡಿದಿದ್ದಿದೆ. 'ನನ್ನ ಮಗ ತನ್ನದೇ ಆದ ಹಾದಿ ಹಿಡಿದಿದ್ದಾನೆ. ತನ್ನ ಗುರಿ ತಲುಪಲು ಕಠಿಣ ಶ್ರಮ ಹಾಕುತ್ತಿದ್ದಾನೆ. ಅವನ ಬಗೆಗೆ ಹೆಮ್ಮೆಯಾಗುತ್ತದೆ' ಎಂದು ಪ್ರಿಯಾಂಕಾ ಟ್ವಿಟರ್‌ನಲ್ಲಿ ಖುಷಿ ಹಂಚಿಕೊಂಡಿದ್ದಾರೆ. ಹೌದು, ರೈಹಾನ್, ತನ್ನ ಅಮ್ಮ ಹೆಮ್ಮೆಯಿಂದ ಬೀಗುವಂತೆ ಮಾಡಿದ್ದಾನೆ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65